# ‘ಗುಮ್ಮಟಪುರ’ದ ಕಿರಿಯ ಪೈಲಟ್ ಸಮೈರಾ



ವಿಜಯಪುರ: ‘ಗುಮ್ಮಟ ನಗರಿ’ ವಿಜಯಪುರದ ಸಮೈರಾ ಹುಲ್ಲೂರು ತಮ್ಮ 18ನೇ ವಯಸ್ಸಿಗೆ ಸಿಪಿಎಲ್ (ವಾಣಿಜ್ಯ ಪೈಲಟ್ ಪರವಾನಗಿ) ಪಡೆದ ಭಾರತದ ಕಿರಿಯ ಮಹಿಳಾ ಪೈಲಟ್‌ಗಳಲ್ಲಿ ಒಬ್ಬರು ಎಂಬ ಕೀರ್ತಿಗೆ ಭಾಜನರಾಗಿದ್ದಾರೆ.

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ 2026 ಗಿವ್ ಟು ಗೇನ್

■ **ಬಸವರಾಜ್ ಸಂಪಳ್ಳಿ**

‘ಗುಮ್ಮಟ ನಗರಿ’ ವಿಜಯಪುರದ ಸಮೈರಾ ಹುಲ್ಲೂರು ತಮ್ಮ 18ನೇ ವಯಸ್ಸಿಗೆ ಸಿಪಿಎಲ್ (ವಾಣಿಜ್ಯ ಪೈಲಟ್ ಪರವಾನಗಿ) ಪಡೆದ ಭಾರತದ ಕಿರಿಯ ಮಹಿಳಾ ಪೈಲಟ್‌ಗಳಲ್ಲಿ ಒಬ್ಬರು ಎಂಬ ಕೀರ್ತಿಗೆ ಭಾಜನರಾಗಿದ್ದಾರೆ.

ವಿಜಯಪುರದ ಪ್ರಸಿದ್ಧ ಇಂಟೀರಿಯರ್ ಡಿಸೈನರ್ ಆಗಿರುವ ಅಮೀನುದ್ದಿನ್ ಹುಲ್ಲೂರ ಮತ್ತು ನಾಝಿಯಾ ಹುಲ್ಲೂರ ದಂಪತಿಯ ಕನಸು ಸಾಕಾರಗೊಳಿಸಿರುವ ಸಮೈರಾ ಹುಲ್ಲೂರು ಸದ್ಯ ನೆರೆಯ ಮಹಾರಾಷ್ಟ್ರದ ಬಾರಾಮತಿಯಲ್ಲಿ ಕಾರ್ವೆರ್ ಏವಿಯೇಷನ್ (ವಾಯುಯಾನ ಶಾಲೆ)ನಲ್ಲಿ ಹುಡುಗರಿಗೆ ತರಬೇತಿ ನೀಡುವ ಗ್ರೌಂಡ್ ಇನ್‌ಸ್ಪೆಕ್ಟರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ವಾಣಿಜ್ಯ ವಿಮಾನಗಳನ್ನು ನಿರ್ವಹಿಸುವ ಜ್ಞಾನ, ಕೌಶಲವನ್ನು ಕರಗತ ಮಾಡಿಕೊಂಡಿರುವ ಸಮೈರಾ ಭವಿಷ್ಯದಲ್ಲಿ ಅವಕಾಶ ಸಿಕ್ಕರೆ ಇಂಡಿಯನ್ ಏರ್‌ಫೋರ್ಸ್, ಕೋಸ್ಟ್ ಗಾರ್ಡ್‌ನಲ್ಲಿ ಸೇವೆ ಸಲ್ಲಿಸಬೇಕು ಇಲ್ಲವೇ ಖಾಸಗಿ ಏರ್‌ಲೈನ್ಸ್ ಅಥವಾ ಕಾರ್ಗೋ ಏರ್‌ಕ್ರಾಫ್ಟ್‌ನಲ್ಲಿ ಕಾರ್ಯನಿರ್ವಹಿಸಬೇಕೆಂಬ ಆಶಯ ಹೊಂದಿರುವ ಸಮೈರಾ ಅವರು ಸದ್ಯ ಖಾಸಗಿ ಕಾರ್ಗೋ ಏರ್‌ಲೈನ್ಸ್‌ನಲ್ಲಿ ಕಾರ್ಯನಿರ್ವಹಿಸುತ್ತಲೇ ಪದವಿ ವ್ಯಾಸಂಗ ಮಾಡುತ್ತಿದ್ದಾರೆ.

ಸಾಂಪ್ರದಾಯಿಕ ಮುಸ್ಲಿಂ ಕುಟುಂಬದಿಂದ ಬಂದಿರುವ ಸಮೈರಾ ಪೈಲಟ್ ಆಗಲು ಅವರ ತಾಯಿ ನಾಝಿಯಾ ಮುಖ್ಯ ಕಾರಣ. ಓದಿನಲ್ಲಿ ಬುದ್ಧಿವಂತೆಯಾದ ಮಗಳನ್ನು ಎಂಜಿನಿಯರ್ ಅಥವಾ ವೈದ್ಯೆ ಮಾಡಬಹುದಿತ್ತು. ಆದರೆ, ಅದಕ್ಕೆ ಸಾಕಷ್ಟು ಸಮಯ ಮತ್ತು ಹಣ ಬೇಕಾಗುತ್ತದೆ. ಓದು ಮುಗಿಸಿ ವೈದ್ಯರಾಗುವ ವೇಳೆಗಾಗಲೇ ಮದುವೆ, ಮಕ್ಕಳು ಎಂಬ ಸಂಸಾರ ಸಾಗರದಲ್ಲಿ ಸಾಧನೆ ಮಾಡಲು, ಹೆಸರು ಮಾಡಲು ಸಮಯಾವಕಾಶವೇ ಇರುವುದಿಲ್ಲ ಎಂಬುದನ್ನು ಮನಗಂಡ ನಾಝಿಯಾ ತಮ್ಮ ಪುತ್ರಿ ವಾಯುಯಾನ ಕ್ಷೇತ್ರದಲ್ಲಿ ಹೆಸರು ಮಾಡಬೇಕು ಎಂಬ ಕನಸು ಕಂಡರು. ಅದರ ಫಲವೇ ಇಂದು ಸಮೀರಾ ಬಾನಂಗಳದಲ್ಲಿ ಹಾರಾಡುವಂತಾಗಿದೆ.

ಸಮೈರಾ ಅವರು ಪ್ರಾಥಮಿಕ, ಪ್ರೌಢಶಾಲೆ ಮತ್ತು ಪದವಿ ಪೂರ್ವ ಶಿಕ್ಷಣವನ್ನು ವಿಜಯಪುರದಲ್ಲಿ ಪೂರ್ಣಗೊಳಿಸಿದ್ದಾರೆ. ಬಾಲ್ಯದಲ್ಲಿ ವಿಜಯಪುರದ ನವರಸಪುರ ಉತ್ಸವದಲ್ಲಿ ಹೆಲಿಕಾಪ್ಟರ್ ಸವಾರಿ ಮಾಡಿದಾಗ ಪೈಲಟ್‌ನಿಂದ ಪ್ರೇರಿತರಾದ ಸಮೈರಾ, ಪಿಯು ಬಳಿಕ ದೆಹಲಿಯಲ್ಲಿ 6 ತಿಂಗಳು ಪೈಲಟ್ ತರಬೇತಿ ಮುಗಿಸಿದ್ದಾರೆ. ದೆಹಲಿಯ ವಿನೋದ್ ಯಾದವ್ ಏವಿಯೇಷನ್ ಅಕಾಡೆಮಿ ಮತ್ತು ಮಹಾರಾಷ್ಟ್ರದ ಬಾರಾಮತಿ ಕಾರ್ವೆರ್ ಏವಿಯೇಷನ್ ಅಕಾಡೆಮಿಯಲ್ಲಿ ತರಬೇತಿ ಪಡೆದಿದ್ದಾರೆ. ವಿಜಯಪುರದಿಂದ ಸಿಪಿಎಲ್ ಪಡೆದ ಮೊದಲ ಹುಡುಗಿ ಇವರು.

ತಂದೆ ಇಂಟೀರಿಯರ್ ಡಿಸೈನರ್, ತಾಯಿ ವಿಜಯಪುರದ ಡೆಲ್ಲಿ ಪಬ್ಲಿಕ್ ಸ್ಕೂಲ್‌ನಲ್ಲಿ ಕೋ ಆರ್ಡಿನೇಟರ್. ದಂಪತಿ ತಮ್ಮ ಮಗಳು ಸಮೈರಾ ಸಾಧನೆಗೆ ಸಂಪೂರ್ಣ ಬೆಂಬಲ ನೀಡಿ, ಅವಳ ಕನಸನ್ನು ನನಸಾಗಿಸಲು ಬೆಂಬಲವಾಗಿ ನಿಂತಿದ್ದಾರೆ. ಸಮೈರಾ ಏರಿದ ಎತ್ತರವು ಇತರೆ ಹೆಣ್ಣುಮಕ್ಕಳಿಗೆ ಸ್ಫೂರ್ತಿಯಾಗಿದೆ. ■

